# ಏಳು ಸುತ್ತಿನ ಕೋಟೆಯಲಿ ಜ್ಯೋತಿರಾಜ!



**ಕಳೆದ ವಾರ ಜೋಗದ ಗುಂಡಿಯೊಳಗಿಳಿದು ಒಂದಿಡೀ ರಾತ್ರಿ ನಾಪತ್ತೆಯಾಗಿ ಆತಂಕ ಮೂಡಿಸಿದ್ದ ಚಿತ್ರದುರ್ಗದ ಜ್ಯೋತಿರಾಜ್ ಎರಡನೇ ಬಾರಿಗೆ ಬದುಕಿ ಬಂದಿದ್ದಾರೆ. ತಮಿಳುನಾಡಿನ ಪುಟ್ಟ ಹಳ್ಳಿಯಿಂದ ಆರಂಭವಾಗಿ ಚಿತ್ರದುರ್ಗದಲ್ಲಿ ಅರಳಿದ ಆತನ ಬದುಕಿನ ಪಯಣ, ಸಿನಿಮಾ ಕಥೆಗಿಂತಲೂ ರೋಚಕವಾಗಿದೆ. ಈತ ವಿಶ್ವದ 'ಟಾಪ್ ಟೆನ್' 'ಸೋಲೊ ರಾಕ್ ಕ್ಲೈಬರ್ಸ್'ಗಳ ಪಟ್ಟಿಯಲ್ಲಿದ್ದಾರೆ.**

■ ಗಾಣಧಾಳು ಶ್ರೀಕಂಠ

**ಚಿ**ತ್ರದುರ್ಗದ ಏಳು ಸುತ್ತಿನ ಕೋಟೆಗೆ ಬರುವ ಪ್ರವಾಸಿಗರು ಕೇಳುವ ಮೊದಲ ಪ್ರಶ್ನೆ 'ಓಬವ್ವನ ಕಿಂಡಿ ಎಲ್ಲಿದೆ'? ಎರಡನೆಯ ಪ್ರಶ್ನೆ– 'ಕೋತಿರಾಜ ಎಲ್ಲಿರ್ತಾನೆ'?

ಜ್ಯೋತಿರಾಜ್ (ಕೋತಿರಾಜ್) 12 ವರ್ಷಗಳಿಂದ ದುರ್ಗದ ಅದೇ ಕೋಟೆಯ ಗೋಡೆಗಳನ್ನು ಏರುತ್ತಾ, ಸಾಹಸ ಮಾಡುತ್ತಾ, ಕೋಟೆ ನಾಡಿನ ಖ್ಯಾತಿಯನ್ನು ಮತ್ತಷ್ಟು ವಿಸ್ತರಿಸಿದ್ದಾರೆ.

ಚಿತ್ರದುರ್ಗದ ಕೋಟೆಯೊಳಗಿನ ಪ್ರವಾಸಿ ತಾಣಗಳದ್ದೇ ಒಂದು 'ತೂಕ'ವಾದರೆ ಜ್ಯೋತಿರಾಜನ ಬಂಡೆ ಏರುವ ಸಾಹಸ ಪ್ರದರ್ಶನ ಮತ್ತೊಂದು 'ತೂಕ'! ಇದು ಉತ್ಪ್ರೇಕ್ಷೆ ಎಂದೆನಿಸಿದರೂ, ಪ್ರವಾಸಿಗರ ಆಕರ್ಷಣೆಯ ವಿಷಯದಲ್ಲಿ ವಾಸ್ತವ ಸಂಗತಿ. ಹೀಗಾಗಿ ಕೋಟೆ ಸುತ್ತಾಡಿ ಬರುವರಿಗೆ ಕೋಟೆಯೊಳಗಿನ ಜ್ಯೋತಿರಾಜನ ಸಾಹಸ ನೋಡದಿದ್ದರೆ, ಪ್ರವಾಸವೇ ಅಪೂರ್ಣವಾಗುತ್ತದೆ ಎಂಬ ಅಭಿಪ್ರಾಯವೂ ಇದೆ.

## ಟೂರಿಸಂ ಲ್ಯಾಂಡ್ ಮಾರ್ಕ್

ಈ ಮಾತುಗಳಿಗೆ ಸಾಕ್ಷ್ಯ ಬೇಕೆಂದರೆ, ಶನಿವಾರ ಮತ್ತು ಭಾನುವಾರ ದುರ್ಗದ ಕೋಟೆಯ 6ನೇ



ವಿನ್ಯಾಸ: ದಿಲ್